ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 95-99
Bi-Monthly, Peer-Reviewed, Open Access, Indexed Journal

ISSN: 2583-3510
SIRDF JOURNALS
editor@srujani.in
www.srujani.in

# ಮೀಸಲಾತಿ ಮತ್ತು ಸಾಮಾಜಿಕ ಪ್ರಾತಿನಿಧ್ಯತೆ: ಒಂದು ಅಧ್ಯಯನ

**ಚಂದ್ರಶೇಖರ್ ಕೆ.[*] ಮತ್ತು ಪ್ರೊ. ಆರ್.ಸಿದ್ದರಾಜು[**]**

[*]ಸಂಶೋಧನಾ ವಿದ್ಯಾರ್ಥಿ, ಗಾಂಧಿ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
[**] ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ವಿವಿ, ಮೈಸೂರು.

***Abstract:***

*ಭಾರತ ಸಂವಿಧಾನವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ನೀಡಬೇಕೆಂಬ ಉದ್ದೇಶದಿಂದ ಶೈಕ್ಷಣಿಕ–ರಾಜಕೀಯ, ಉದ್ಯೋಗ ಮುಂತಾದ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ನೀಡಿದೆ. ಜನಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯತೆಯಿಲ್ಲದ ಸಮುದಾಯಗಳ ಹಕ್ಕುಗಳನ್ನು ಸಂರಕ್ಷಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ಮೀಸಲಾತಿಯ ಪ್ರಮುಖ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಹಿಂದುಳಿದವರು, ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದವರು, ಮಹಿಳೆಯರು, ಅಲ್ಪಸಂಖ್ಯಾತರು, ಆದಿವಾಸಿಗಳು ಮತ್ತು ದಲಿತ ಸಮುದಾಯಗಳಿಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮಾನತೆ ಸಾಧಿಸುವಲ್ಲಿ ಮೀಸಲಾತಿ ಹೇಗೆ ಅನುಕೂಲವಾಗಿದೆ ಎಂಬುದನ್ನು ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.*

**Keywords:** *ಸಂವಿಧಾನ, ಪ್ರಜಾಪ್ರಭುತ್ವ, ಮೀಸಲಾತಿ, ಸಾಮಾಜಿಕ ನ್ಯಾಯ, ಹಿಂದುಳಿದಿರುವಿಕೆ.*

## ಪೀಠಿಕೆ

ಭಾರತ ಸರ್ಕಾರವು ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಸಮುದಾಯಗಳಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸಾಮಾಜಿಕ ನ್ಯಾಯ ಒದಗಿಸಬೇಕೆಂಬ ಉದ್ದೇಶದಿಂದ ಮೀಸಲಾತಿ ಸೌಲಭ್ಯವನ್ನು ಕಲ್ಪಿಸುವುದರ ಮುಖೇನ ಅವಕಾಶ ಕಲ್ಪಿಸಿದೆ. ಜನಸಂಖ್ಯೆಗನುಗುಣವಾಗಿ ಸರ್ಕಾರಿ, ಸಾರ್ವಜನಿಕ ಕ್ಷೇತ್ರಗಳಲ್ಲಿ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಿದೆ. ಆಯಾಯ ರಾಜ್ಯಗಳು ತಮಗೆ ಅನುಕೂಲಕರ ಪ್ರಮಾಣದಲ್ಲಿ ಮೀಸಲಾತಿಯನ್ನು ನಿಗದಿ ಪಡಿಸಲು ಭಾರತ ಸರ್ಕಾರವು ಅವಕಾಶ ಕಲ್ಪಿಸಿದೆ. ಆದರೆ ಮೀಸಲಾತಿಯ ಪ್ರಮಾಣವು ಶೇ.50 ಕ್ಕಿಂತ ಹೆಚ್ಚಾಗಬಾರದು. ರಾಜಸ್ಥಾನದಂತಹ ರಾಜ್ಯಗಳಲ್ಲಿ ಇದು 68%ರಷ್ಟಿದೆ ಏಕೆಂದರೆ ಇದರಲ್ಲಿ 14% ಪ್ರಮಾಣವನ್ನು ಮುಂದುವರೆದ ಸಮುದಾಯದವರಿಗೂ ಕಲ್ಪಿಸಲಾಗಿದೆ.

ಕಡಿಮೆ ಸಾಮಾಜಿಕ ಪ್ರಾತಿನಿಧ್ಯತೆ ಹೊಂದಿರುವ ಅಥವ ಪ್ರಾತಿನಿಧ್ಯವೆ ಇಲ್ಲದ ಅನೇಕ ಸಮುದಾಯಗಳು ಭಾರತದಲ್ಲಿದ್ದು, ಭಾರತದ ಸಾಮಾಜಿಕ ವ್ಯವಸ್ಥೆ ಈ ಅಸಮಾನತೆಗಳಿಗೆ ಕಾರಣವಾಗಿದೆ. ಸ್ವಾತಂತ್ರ್ಯ ನಂತರ ಸಂವಿಧಾನವು ಮೊದಲು ಹತ್ತು ವರ್ಷಗಳವರೆಗೆ ನಿಗದಿ ಮಾಡಿದೆ. ಹಾಗೂ ಆಯಾಯ ಸಂಧರ್ಭಕ್ಕೆ ವಿಸ್ತರಿಸುವ ಅವಕಾಶ ಕಲ್ಪಸಲಾಗಿದೆ.

ಮೀಸಲಾತಿಯನ್ನು ಐತಿಹಾಸಿಕವಾಗಿ ಅಸಮಾನತೆ ಹಾಗೂ ಪ್ರಾತಿನಿಧಿತ್ವದ ಕೊರತೆ ಇರುವ ಆಧಾರದಲ್ಲಿ ನೀಡಲಾಗುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸಾಮಾನ್ಯವರ್ಗದ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೂ ಉದ್ಯೋಗ ಹಾಗೂ ಶೈಕ್ಷಣಿಕ ಮೀಸಲಾತಿಯನ್ನು ನೀಡಲಾಗಿದೆ. ಆದರೆ

***Please cite this article as:*** ಚಂದ್ರಶೇಖರ್ ಕೆ & ಆರ್.ಸಿದ್ದರಾಜು. (2022). ಮೀಸಲಾತಿ ಮತ್ತು ಸಾಮಾಜಿಕ ಪ್ರಾತಿನಿಧ್ಯತೆ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(3), 95–99.

ಇದು ಅವೈಜ್ಞಾನಿವಾದುದು ಏಕೆಂದರೆ ಮೀಸಲಾತಿ ಇರುವುದು ಬಡತನ ನಿರ್ಮೂಲನೆ ಅಥವ ಆರ್ಥಿಕ ಸಬಲೀಕರಣ ಮಾಡುವುದಲ್ಲ ಬದಲಿಗೆ ಶತ-ಶತಮಾನಗಳಿಂದ ತುಳಿತಕ್ಕೆ ಒಳಗಾಗಿ ಅವಕಾಶ ವಂಚಿತ ಜನರಿಗೆ ಅವಕಾಶ ಕಲ್ಪಿಸುವುದಾಗಿದೆ.

ಅಸಮಾನತೆ ಗರ್ಭೀಕರಿಸಿಕೊಂಡ ಭಾರತೀಯ ಸಮಾಜದಲ್ಲಿ ಮೀಸಲಾತಿ ಕೇಳುವುದು ಶಾಸನಬದ್ಧ ಹಕ್ಕಾಗಿದೆ. ಸಂವಿಧಾನದ ಪ್ರಕಾರ ಸಾಮಾಜಿಕ ನ್ಯಾಯ ಒದಗಿಸುವುದು ಸರಕಾರದ ಕರ್ತವ್ಯವಾಗಿದೆ. ಸಂವಿಧಾನದಲ್ಲಿ ಸೆಕ್ಯುಲರ್ ಎಂಬ ಶಬ್ದ ಬಳಸಲಾಗಿದೆ. ಅಂದರೆ ಸರಕಾರ ಧರ್ಮಾತೀತ ವಾಗಿರಬೇಕು. ಬಹುಭಾಷೆ ಹೊಂದಿದ ಭಾರತದಲ್ಲಿ ಸೆಕ್ಯುಲರ್ ಎಂಬ ಶಬ್ದ ತನ್ನ ಮೂಲ ಅರ್ಥ ಕಳೆದುಕೊಂಡಿದೆ. ಸಾಮಾಜಿಕ ನ್ಯಾಯದ ವಿರುದ್ಧ ದಿಕ್ಕಿನಲ್ಲಿ ಭಾರತ ಇಂದು ಚಲಿಸುತ್ತಿದೆ ಎಂದರೆ ತಪ್ಪಾಗಲಾರದು. ಅದಕ್ಕೆ ಇತ್ತೀಚೆಗೆ ಜರಗುತ್ತಿರುವ 'ಮೀಸಲಾತಿ' ಚಳುವಳಿಗಳೇ ಸಾಕ್ಷಿ. ಮಠದಲ್ಲಿರಬೇಕಾದ ಸ್ವಾಮಿಗಳು ಬೀದಿಗೆ ಬಂದಿದ್ದಾರೆ. ಸಾಮಾಜಿಕ ನ್ಯಾಯದ ಅಡಿಯಲ್ಲಿ ಪ್ರಬಲ ಜಾತಿ ಗುಂಪುಗಳು ಮೀಸಲಾತಿ ಹಕ್ಕೊತ್ತಾಯಿಸಲು ಶಕ್ತಿಕೇಂದ್ರದ ಬಾಗಿಲಿಗೆ ಸರತಿಯಲ್ಲಿ ನಿಂತಿವೆ. ಆದರೆ ನಿಜವಾಗಿ ಅನ್ಯಾಯಕ್ಕೆ ಒಳಗಾದವರು ಮೌನವಾಗಿದ್ದಾರೆ.

ಮಿಲ್ಲರ್ ಸಮಿತಿಯ ಪ್ರಕಾರ ಬ್ರಾಹ್ಮಣರು, ಯುರೋಪಿಯನ್ ಹಾಗೂ ಆಂಗ್ಲೋ ಇಂಡಿಯನ್ ಸಮೂಹಗಳನ್ನು ಬಿಟ್ಟು ಎಲ್ಲ ಸಮೂಹಗಳು ಹಿಂದುಳಿದವರ ಪಟ್ಟಿಯಲ್ಲಿ ಸೇರ್ಪಡೆ ಆದವು. ಅಸ್ಪಶ್ಯರನ್ನು ಡಿಪ್ರೆಸ್ಡ್‌ಕ್ಲಾಸ್ ಎಂದು ಕರೆಯಲಾಯಿತು. ಇಂಗ್ಲಿಷ್ ಸಾಕ್ಷರತಾ ಪ್ರಮಾಣ ಶೇಕಡ ಐದಕ್ಕಿಂತ ಕಡಿಮೆ ಇದ್ದರೆ ಆ ಸಮುದಾಯದವರನ್ನು ಹಿಂದುಳಿದವರೆಂದು ಪರಿಗಣಿಸಲಾಯಿತು.

1909ರಲ್ಲಿ ಮಿಂಟೋ ಮಾರ್ಲೆ ಕಾಯ್ದೆಯಲ್ಲಿ ಬ್ರಿಟಿಷರು, ಮುಸ್ಲಿಂರನ್ನು ಒಂದು ಪ್ರತ್ಯೇಕವಾದ ಸಮುದಾಯವೆಂದು ಗುರುತಿಸಿ, ಅವರಿಗೆ ಪ್ರತ್ಯೇಕವಾದ ಚುನಾವಣೆಯ ಹಕ್ಕನ್ನು ನೀಡಿದರು. 1911 ರಲ್ಲಿ ವಿವಿಧ ಮಾನದಂಡಗಳ ಆಧಾರದ ಮೇಲೆ ಹಿಂದುಗಳಲ್ಲ 429 ಜಾತಿಗಳನ್ನು ಪಟ್ಟಿಮಾಡಲಾಯಿತು. ಈ ಜನಗಣತಿ ಹಿಂದುಳಿದವರಿಗೆ ಮತ್ತು ಅಸ್ಪೃಶ್ಯರಿಗೆ ಒಂದು ಅಸ್ತಿತ್ವವನ್ನು ತಂದುಕೊಟ್ಟಿತು. 1911ರ ಜನಗಣತಿ ಆಧಾರದ ಮೇಲೆ ಡಾ.ಬಿ.ಆರ್.ಅಂಬೇಡ್ಕರ್ 1918ರಲ್ಲಿ ಸೌತ್ ಬರೋ ಆಯೋಗದ ಮುಂದೆ ಶೋಷಿತ ಸಮುದಾಯಗಳನ್ನು ಮೇಲೆತ್ತಲು ಮತದಾನ ಹಕ್ಕು ಹಾಗೂ ರಾಜಕೀಯದಲ್ಲಿ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನು ನೀಡಬೇಕೆಂದು ಒತ್ತಾಯಿಸಿದರು. 1928ರಲ್ಲಿ ಬ್ರಿಟಿಷರು ಸೈಮನ್ ಕಮಿಷನ್ ಸ್ಥಾಪಿಸಿದರು. ಅಂಬೇಡ್ಕರವರನ್ನು ಸೈಮನ್ ಕಮಿಷನ್ನಿನ ಸದಸ್ಯರನ್ನಾಗಿ ನೇಮಕ ಮಾಡಿತು. ಅಂಬೇಡ್ಕರವರು ಅದೊಂದು ಸವಾಲಂತೆ ಸ್ವೀಕರಿಸಿ ಅವಿಶ್ರಾಂತ ಅಧ್ಯಯನ ಮಾಡಿ ತಳಸಮುದಾಯದ ಪರವಾಗಿ ಕೆಲವು ದಾಖಲಾತಿಗಳನ್ನು ಸಂಗ್ರಹಿಸಿ ಸೈಮನ್ ಆಯೋಗಕ್ಕೆ ವರದಿಯನ್ನು ಸಲ್ಲಿಸಿದರು. ಸೈಮನ್ ಆಯೋಗ, ದಲಿತರಿಗೆ ಉದ್ಯೋಗ ಮೀಸಲಾತಿ ನೀಡಬೇಕೆಂದು ತನ್ನ ಶಿಫಾರಸ್ಸಿನಲ್ಲಿ ತಿಳಿಸಿತು. ಆದ್ದರಿಂದ ತಳಸಮುದಾಯದ ಜನರಿಗೆ ಅವಕಾಶ ಕಲ್ಪಿಸಲೆಂದೇ ಚರ್ಚೆಗೆ ಒಂದು ದುಂಡು ಮೇಜಿನ ಸಭೆ ಕರೆಯಿತು. 1930ರಲ್ಲಿ ನಡೆದ ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿ ಅಂಬೇಡ್ಕರವರು ಭಾರತದ ಎಲ್ಲಾ ಶೋಷಿತ ವರ್ಗದವರಿಗೆ ಮತದಾನದ ಹಕ್ಕು, ರಾಜಕೀಯ ಪ್ರತ್ಯೇಕ ಚುನಾಯಕಗಳು ಹಾಗೂ ಕಾರ್ಯಾಂಗದಲ್ಲಿ ಮೀಸಲಾತಿ ನೀಡಬೇಕೆಂದು ಒತ್ತಾಯಿಸಿದರು. 1931ರ ಎರಡನೇ ದುಂಡು ಮೇಜಿನ ಸಭೆಗೆ ಆಗಮಿಸಿದ ಗಾಂಧೀಜಿಯವರು ಅಂಬೇಡ್ಕರ್‌ರವರು ಈ ಮನವಿಯನ್ನು ವಿರೋಧಿಸಿದರು. ಆದರೂ 1932ರಲ್ಲಿ ಅಸ್ಪೃಶ್ಯರಿಗೆ 78 ವಿಶೇಷ ಮತಕ್ಷೇತ್ರಗಳನ್ನು ಹಾಗೂ ಜಂಟಿ ಮತದಾನ ಹಕ್ಕಗಳು ಅಸ್ಪೃಶ್ಯರಿಗೆ ನೀಡಿತು. ಆದರೆ ಗಾಂಧೀಜಿ ಅವರು ತೀರ್ಪನ್ನು ವಿರೋಧಿಸುತ್ತಾ

ಉಪವಾಸ ಸತ್ಯಾಗ್ರಹದ ಮೂಲಕ ಅಂಬೇಡ್ಕರ್‌ರವರ ಮೇಲೆ ಒತ್ತಡ ಹೇರಿ ದಲಿತರ ಪ್ರತ್ಯೇಕ ಚನಾಯಕಗಳಿಗೆ ಬದಲಾಗಿ ಜಂಟಿ ಚುನಾಯಕಗಳು ಜಾರಿಗೆ ಬಂದವು.

**ಭಾರತದ ಸಂವಿಧಾನ ಮತ್ತು ಮೀಸಲಾತಿ**

ಭಾರತ ಸಂವಿಧಾನವು ಮೂಲಭೂತಹಕ್ಕಗಳನ್ನು ನೀಡುವುದರ ಮುಖೇನೆ ಎಲ್ಲಾ ಪ್ರಜೆಗಳ ಹಕ್ಕುಗಳನ್ನು ರಕ್ಷಿಸುತ್ತಿದೆ. ಅನುಚ್ಛೇದ15ರ ಪ್ರಕಾರ ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರಗಳ ಮೇಲೆ ತಾರತಮ್ಯದ ನಿಷೇಧವಿದೆ. 15(2)ರಲ್ಲಿ ಎ) ಅಂಗಡಿಗಳು, ಸಾರ್ವಜನಿಕ ಉಪಹಾರ ಗೃಹಗಳು, ಹೋಟೇಲು ಮತ್ತು ಸಾರ್ವಜನಿಕ ಮನೋರಂಜನ ಸ್ಥಳಗಳಿಗೆ ಪ್ರವೇಶ ಸಂಬಂಧದಲ್ಲಿ ಬಿ) ಕೆರೆಗಳು, ಬಾವಿಗಳು, ಸ್ನಾನ ಘಟ್ಟಗಳು, ರಸ್ತೆಗಳೂ, ನಿರ್ಬಂಧಕ್ಕೆ ಅಥವಾ ಷರತ್ತಿಗೆ ಒಳಪಟ್ಟಿರತಕ್ಕದಲ್ಲ. 15(4) ಅನುಚ್ಛೇದದಲ್ಲಿ ಅಥವಾ 29ನೆಯ ಅನುಚ್ಛೇದದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ಯಾವುದೇ ವರ್ಗಗಳ ಅಭಿವೃದ್ಧಿಗೆ ಅಥವಾ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಸಲುವಾಗಿ ರಾಜ್ಯವು ಯಾವುದೇ ವಿಶೇಷ ಉಪಬಂಧವನ್ನು ಮಾಡದಂತೆ ಪ್ರತಿಬಂಧಿಸತಕ್ಕದಲ್ಲ. ಅನುಚ್ಛೇದ–16(4) ಪ್ರಕಾರ ಯಾವುದೂ, ಯಾವುದೇ ಹಿಂದುಳಿದ ವರ್ಗಗಳ ನಾಗರಿಕರು ರಾಜ್ಯದ ಅಧೀನದಲ್ಲಿರುವ ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವನ್ನು ಹೊಂದಿಲ್ಲವೆಂದು ರಾಜ್ಯವು ಅಭಿಪ್ರಾಯಪಟ್ಟಲ್ಲಿ ಅಂಥವರಿಗಾಗಿ ನೇಮಕಗಳನ್ನು ಅಥವಾ ಹುದ್ದೆಗಳನ್ನು ಮೀಸಲಿಡುವುದಕ್ಕಾಗಿ ಯಾವುದೇ ಉಪಬಂಧವನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದಲ್ಲ.

ಅನುಚ್ಛೇದ 17ರ ಪ್ರಕಾರ ಅಸ್ಪೃಶ್ಯತೆ ನಿರ್ಮೂಲನೆಗೊಳಿಸಲಾಗಿದೆ. 21(ಎ) ಅನುಚ್ಛೇದದ ಪ್ರಕಾರ 6 ರಿಂದ 14 ವರ್ಷಗಳ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಒದಗಿಸತಕ್ಕದ್ದು. ಅನುಚ್ಛೇದ 29 ಹಾಗೂ 30ರ ಪ್ರಕಾರ ಅಲ್ಪಸಂಖ್ಯಾತರ ಹಿತಾಸಕ್ತಿಯ ಕಾಪಾಡಲು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳನ್ನು ಒದಗಿಸಿದೆ. ಇವರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸಬಹುದಾಗಿದೆ. ಅನುಚ್ಛೇದ 15(4)ರಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಶೇ 15 ಹಾಗೂ. 7.5 ರಷ್ಟು ಮೀಸಲಾತಿಯನ್ನು ಇವರಿಗೆ ನೀಡಲಾಗಿದೆ. 330 ರ ಅನುಚ್ಛೇದ ಪ್ರಕಾರ ಪರಿಶಿಷ್ಟಜಾತಿ ಹಾಗೂ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಭಾರತದ ಲೋಕಸಭೆಯಲ್ಲಿ ಮೀಸಲಾತಿ ನೀಡಲಾಗಿದೆ. 332ರ ಅನುಚ್ಛೇದದಲ್ಲಿ ರಾಜ್ಯಗಳ ವಿಧಾನಸಭೆಗಳಲ್ಲಿ ಅನುಸೂಚಿ ಜಾತಿ ಮತ್ತುಅನುಸೂಚಿ ಬುಡಕಟ್ಟುಗಳಿಗೆ ಸ್ಥಾನಗಳನ್ನು ಮೀಸಲಿಡುವುದು. 335ರ ಅನುಚ್ಛೇದ ಪ್ರಕಾರ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸೇವೆಗಳಲ್ಲಿ ಹಾಗೂ ಹುದ್ದೆಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಬುಡಕಟ್ಟು ಜನರ ಹಕ್ಕುಸಾಧಿಸಲು ಸಾಧ್ಯವಾಗಿದೆ. 338 ಹಾಗೂ 338(ಎ)ನೆಯ ಅನುಚ್ಛೇದವು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟು ಜನರ ಆರ್ಥಿಕ ಹಿತಕಾಪಾಡಲು ಹಾಗೂ ಇವರಿಗೆ ನೀಡಿರುವ ಹಕ್ಕುಗಳು ಜಾರಿಯಾಗುವಂತೆ ಮಾಡಲು ರಾಷ್ಟ್ರೀಯ ಆಯೋಗ ಇರತಕ್ಕದ್ದು. ಅದರಂತೆ ಇಂದು ಆಯೋಗಗಳು ತಮಗೆ ನೀಡಿದ ಕಾರ್ಯ ಮಾಡಲು ಪ್ರಯತ್ನಿಸಿವೆ. 275ನೇ ಅನುಚ್ಛೇದದ ಪ್ರಕಾರ ಕೇಂದ್ರ ಸರ್ಕಾರವು ಸಂಪತ್ತಿನ ಕಾನೂನಿನ ಮೂಲಕ ಯಾವುದೇ ರಾಜ್ಯದಲ್ಲಿ ಅನುಸೂಚಿತ ಬುಡಕಟ್ಟುಗಳ ಕಲ್ಯಾಣ ಅಭಿವೃದ್ಧಿಗಾಗಿ ಭಾರತದ ಸಂಚಿತ ನಿಧಿಯಿಂದ ಹಣವನ್ನು ಬಿಡುಗಡೆ ಮಾಡಬಹುದಾಗಿದೆ. ಹೀಗೆ ಅಂಬೇಡ್ಕರವರ ಸಂವಿಧಾನ ರಚನೆ ಫಲವಾಗಿ ಇಂದು ದಲಿತರು, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಅಧಿಕಾರ ಪಡೆದುಕೊಳ್ಳುವುದಕ್ಕೆ

ಸಾಧ್ಯವಾಗಿದೆ. ಒಂದು ವೇಳೆ ಅಂಬೇಡ್ಕರ್ ಅವರು ಸಂವಿಧಾನ ಬರೆಯದೆ ಇದ್ದರೆ ದಲಿತರ ಪರಿಸ್ಥಿತಿ ಊಹೆಗೂ ನಿಲುಕದ, ಚಿಂತಾಜನಕವಾದ ಸ್ಥಿತಿಯಲ್ಲಿರುತ್ತಿತ್ತು ಎಂದು ಚರಿತ್ರೆ ಹೇಳುತ್ತದೆ.

**ಹಿಂದುಳಿದ ವರ್ಗಗಳಿಗೆ ಮೀಸಲಾತಿ**

ಮೈಸೂರು ಸಂಸ್ಥಾನದಲ್ಲಿದ್ದ ಒಕ್ಕಲಿಗ, ಲಿಂಗಾಯಿತ, ಮುಸ್ಲಿಂರು ಹಾಗೂ ಮತ್ತಿತರ ಸಮುದಾಯದವರು ಆಡಳಿತ ಮತ್ತು ಉದ್ಯೋಗದಲ್ಲಿ ಪಾಲು ನೀಡಬೇಕೆಂದು ಮೀಸಲಾತಿಗೆ ಮನವಿಯನ್ನು ಸಲ್ಲಿಸಿದರು. ಈ ಮನವಿಯ ಆಧಾರದ ಮೇಲೆ ಮೈಸೂರು ಪ್ರಾಂತದ ಬ್ರಾಹ್ಮಣೇತರ ಈ ಹಿನ್ನಲೆಯಲ್ಲಿ 1918 “ಹಿಂದುಳಿದ ವರ್ಗಗಳ ಆಯೋಗ” ರಚನೆಯನ್ನು ಮಾಡಿತು. ಸರ್. ಲೆಸ್ಲಿಮಿಲ್ಲರ್ ಈ ಆಯೋಗದ ಅಧ್ಯಕ್ಷರಾಗಿದ್ದರುಈ ಆಯೋಗವು ಮೈಸೂರು ಪ್ರಾಂತದಲ್ಲಿ ಬ್ರಾಹ್ಮಣರ ಪ್ರಾತಿನಿಧ್ಯ ಹೆಚ್ಚಾಗಿದ್ದು, ಹಿಂದುಳಿದ ವರ್ಗಗಳಿಗೂ ಸಾಕಷ್ಟು ಪ್ರಾತಿನಿಧ್ಯ ನೀಡಬೇಕೆನ್ನುವುದು ಸರ್ಕಾರದ ಉದ್ದೇಶವಾಗಿದೆ ಎನ್ನುವುದನ್ನು ಸ್ಪಷ್ಟಪಡಿಸಿತು. ಸರ್. ಲೆಸ್ಲಿಮಿಲ್ಲರ್ ಆಯೋಗ 1919 ಜುಲೈ 8 ರಂದು ಮಹಾರಾಜರಿಗೆ ವರದಿ ನೀಡಿತು. ವರದಿಯ ಆಧಾರದ ಮೇಲೆ ಬ್ರಾಹ್ಮಣರು ಮತ್ತು ಆಂಗ್ಲೋ–ಇಂಡಿಯನ್ನರನ್ನು ಹೊರತುಪಡಿಸಿ ಉಳಿದ ಶೇ75 ರಷ್ಟು ಮೀಸಲಾತಿ ಹಿಂದುಳಿದ ವರ್ಗಗಳಿಗೆ 1921ರಲ್ಲಿ ನೀಡಿತು.

ಸ್ವಾತಂತ್ರ್ಯದ ನಂತರ 1953 ಕಾಕಾ ಕಾಲೇಲ್ಕರ್ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಆಯೋಗ ನೇಮಿಸಿತು. 1955 ಮಾರ್ಚ್ 30 ರಂದು 2399 ಹಿಂದುಳಿದ ಜಾತಿಗಳು ಇವೆ ಅವರಿಗಾಗಿ ಮೀಸಲಾತಿಗೆ ಶಿಫಾರಸ್ಸು ಮಾಡಿ ವರದಿ ಸಲ್ಲಿಸಿತು. ನಂತರ 1978ರಲ್ಲಿ ಮೊರಾರ್ಜಿ ದೇಸಾಯಿರವರು “ಮಂಡಲ್ ಆಯೋಗ”ವನ್ನು ರಚಿಸಿದರು. ಈ ಆಯೋಗವು 1980ರಲಿ ವರದಿಯನ್ನು ಸಲ್ಲಿಸಿತು. ಇದರ ಪರಿಣಾಮವಾಗಿ 1990ರ ಸರ್ಕಾರ ಹಿಂದುಳಿದ ಜಾತಿಗಳಿಗೆ ಉದ್ಯೋಗದಲ್ಲಿ ಮಾತ್ರ ಶೇ.27 ರಷ್ಟು ಮೀಸಲಾತಿಯನ್ನು ನೀಡಿತು. ನಂತರ 1992 ರ ಸರ್ಕಾರ ಹಿಂದುಳಿದ ಜಾತಿಗಳಿಗೆ ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯ ಮೀಸಲಾತಿಯನ್ನು ಜಾರಿಗೆ ತಂದಿತು. ಮುಂದೆ 1998ರಲ್ಲಿ ಅನುಚ್ಛೇದ 16(4)ಕ್ಕೆ ತಿದ್ದುಪಡಿಯನ್ನು ಮಾಡಿ ಪರಿಶಿಷ್ಟ ಜಾತಿ/ಪಂಗಡದರಿಗೆ ಬಡ್ತಿ ಮೀಸಲಾತಿ ನೀಡಲಾಯಿತು.

ಮೀಸಲಾತಿ ಕೇವಲ ಸರ್ಕಾರಿ ಕ್ಷೇತ್ರದಲ್ಲಿ ಮಾತ್ರ ಇದೆ. ಆದರೆ ಸರ್ಕಾರ ಖಾಸಗೀಕರಣಕ್ಕೆ ಒತ್ತು ನೀಡುತ್ತಿದೆ. ಖಾಸಗೀಕರಣ ಪ್ರಬಲವಾದಂತೆ ಸಾಮಾಜಿಕ ನ್ಯಾಯದ ಪರಿಕಲ್ಪನೆ ಸೊರಗುತ್ತದೆ. ಖಾಸಗೀಕರಣವು ಸಾಮಾಜಿಕ ನ್ಯಾಯದ ವಿರೋಧವೇ ಆಗಿದೆ. ಹಾಗಾಗಿ ಖಾಸಗೀಕರಣದಲ್ಲಿ ಮೀಸಲಾತಿ ಬೇಕು ಎನ್ನುವ ಕೂಗು ಎದ್ದಿದೆ.

**ಉಪಸಂಹಾರ**

ಭಾರತದಲ್ಲಿ ಪರಿಶಿಷ್ಟ ಜಾತಿ ಶೇ15ರಷ್ಟು, ಪರಿಶಿಷ್ಟ ಪಂಗಡಕ್ಕೆ ಶೇ7.5 ಹಿಂದುಳಿದ ವರ್ಗದವರಿಗೆ ಶೇ27ರಷ್ಟು ನೀಡಿದ್ದಾರೆ. ಒಟ್ಟು ಮೀಸಲಾತಿ ಪ್ರಮಾಣ ಶೇ49.5ರಷ್ಟು, ಆರ್ಥಿಕವಾಗಿ ಹಿಂದುಳಿದ ಸಾಮಾನ್ಯ ವರ್ಗದವರಿಗೂ ಮೀಸಲಾತಿ ಇದೆ. ಜಾತಿವ್ಯವಸ್ಥೆ ಇಂದಿಗೂ ತನ್ನ ಪ್ರಭುತ್ವ ಸಾಧಿಸಿದೆ. ಇಂತಹ ಸಮಯದಲ್ಲಿ ಪ್ರಬಲ ವರ್ಗಗಳು ಮೀಸಲಾತಿ ಕೇಳುವುದು ಸರ್ಕಾರದ ಮೇಲೆ ಪ್ರಭಾವ ಬೀರುವುದಕ್ಕೆ ಪ್ರಯತ್ನ ಮಾಡಿವೆ. ಇಂದು ಬುಡಕಟ್ಟು ಜನರು, ಹಿಂದುಳಿದ ಶೂದ್ರ ಸಮುದಾಯಗಳು, ಪರಿಶಿಷ್ಟ ಸಮುದಾಯಗಳು ಮುಂದಕ್ಕೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ಸರ್ಕಾರ

ಮತ್ತು ಸರ್ವೋಚ್ಚ ನ್ಯಾಯಾಲಗಳು ಮೀಸಲಾತಿಯ ಪಾವಿತ್ರ್ಯತೆಯನ್ನು ಕಾಪಾಡಿ ನಿಜವಾಗಿಯೂ ವಂಚಿತವಾದ ಸಮುದಾಯಗಳ ರಕ್ಷಣೆಗೆ ಅವಕಾಶ ನೀಡಬೇಕಿರುವುದು ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ದ್ವಾರಕಾನಾಥ್ ಎಸ್. (2020). ಭಾರತದ ಸಂವಿಧಾನ. ಕಲಾ ಕುಸುಮ ಪ್ರಕಾಶನ.
- ರಾಮ್ ಪುನಿಯಾನಿ (ಮೂಲ)., ಬಿ. ಸುಜ್ಞಾನ ಮೂರ್ತಿ (ಅನು.) (2016). ದಲಿತ ರಾಜಕೀಯ ಒಂದು ಸಚಿತ್ರ ದರ್ಶನ. ಲಡಾಯಿ ಪ್ರಕಾಶನ.
- ಶಿವಕುಮಾರ. (2017). ಅಸ್ಪೃಶ್ಯತೆ ನಿಮ್ಮ ಇತಿಹಾಸ ಬಲ್ಲಿರಾ?. ಪ್ರಬುದ್ಧ ಪ್ರಕಾಶನ.